ನಿಷೇಧಿಸಲಾಗಿದೆ, ಸೀಟಿನ ಮೇಲೆ ಕಾಲಿಡಬೇಡಿ, ಕಿಟಕಿ ಹೊರಗೆ ಕೈ-ತಲೆ ಚಾಚಬೇಡಿ, ನಿಮ್ಮ ಸಾಮಾನಿಗೆ ನೀವೇ ಜವಾಬ್ದಾರರು, ಚಾಲಕರೊಂದಿಗೆ ಮಾತಾಡಬೇಡಿ, ಇದು ನಿಮ್ಮ ವಾಹನ: ಶುಚಿಯಾಗಿಡುವುದು ನಿಮ್ಮ ಕರ್ತವ್ಯ, ಉದ್ರಿ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ, ತಟ್ಟೆಯಲ್ಲಿ ಕೈತೊಳೆಯಬಾರದು, ಎರಡನೇ ಸಲ ಚಟ್ನಿ ಕೊಡಲಾಗುವುದಿಲ್ಲ, ಮಹಿಳೆಯರಿಗೆ ಪ್ರವೇಶವಿಲ್ಲ, ಮೊದಲಾದ ಫಲಕಗಳಲ್ಲಿರುವ ವಿಧಿನಿಷೇಧಗಳನ್ನು ಗಮನಿಸಿ. ಕರ್ನಾಟಕದ ಮಹಾಜನರು ಯಾವೆಲ್ಲ ಮೌಲ್ಯಗಳನ್ನು ಮರೆತಿದ್ದಾರೆ, ಯಾವ ಅಪಾರ ಪ್ರಮಾಣದ ಅಶಿಸ್ತು ತಾಂಡವವಾಡುತ್ತಿದೆ ಎಂದು ಇವು ಸಾರಿಸಾರಿ ಹೇಳುತ್ತವೆ.

ಹೀಗೆ ಬೀದಿಸಾಹಿತ್ಯದ ಒಂದು ಭಾಗವು ಚಿನ್ನದ ನಾಡಿನ ಗಂಧದ ಬೀಡಿನ ಜನರ ಮರ್ಯಾದೆ ತೆಗೆಯುತ್ತಿದ್ದರೆ, ಇನ್ನೊಂದು ಭಾಗವು ಹೀಗೆ ಪೊಲೀಸರಂತೆ ಗದರಿಸದೆ, ಕಾಂತಾಸಂಹಿತೆಯಂತೆ ಜನರಲ್ಲಿ ಎಚ್ಚರ ಹುಟ್ಟಿಸಿ, ಅವರನ್ನು ತಿದ್ದುತ್ತ ಸತ್ಪ್ರಜೆಗಳನ್ನಾಗಿ ರೂಪಿಸುವ ಹೊಣೆಯನ್ನು ನಿಭಾಯಿಸುತ್ತಿರುತ್ತದೆ. 'ಮುತ್ತುಕೊಟ್ಟವಳು ಬಂದಾಗ ತುತ್ತುಕೊಟ್ಟವಳನ್ನು ಮರೆಯಬೇಡ' ಎಂಬುದು ಆಟೋ ಲಾರಿಗಳಲ್ಲಿ ಅತಿಹೆಚ್ಚು ಕಾಣುವ ಶಾಸನ. ಇದು ಭಾರತೀಯ ಕುಟುಂಬಗಳಲ್ಲಿ ನಡೆಯುವ ಭೂಕಂಪದ ಒಂದು ಝಲಕು. ಆದರೆ, ಈ ನೈತಿಕ ಉಪದೇಶವು ನಮ್ಮ ಸೀಮೆಯಲ್ಲಿ ಅಕ್ರಮವಾಗಿ ಅದಿರನ್ನು ಹೊತ್ತೊಯ್ಯುವ ಟಿಪ್ಪರುಗಳ ಮೇಲಿರುವುದು ನನಗರ್ಥವಾಗಿಲ್ಲ. ಬೈಕುಗಳ ಮೇಲೆ ಸಾಮಾನ್ಯವಾಗಿ ಪ್ರೇಮಸಂಬಂಧಿ ಬರಹಗಳು ಹೆಚ್ಚು. ಕೆಲವು ಜಾಣರು 'ಅಪ್ಪ ಅಮ್ಮನ ಆಶೀರ್ವಾದ' ಎಂದು ಕೆತ್ತಿಕೊಂಡಿರುತ್ತಾರೆ. ಹುಡುಗಿ ಕೂರಿಸಿಕೊಂಡು ಹೋಗುವಾಗ ಅಪಘಾತವಾದರೆ ನಾನು ಕಾರಣವಲ್ಲ ಎಂಬ ಸೂಚನೆಯೂ ಅಲ್ಲಿರುತ್ತದೆ. ಈಚೆಗೆ ಈ ಬರಹ 'ವೈರಿಯ ಆಶೀರ್ವಾದ' ಎಂದೂ ಬದಲಾಗಿದೆ.

ಬೀದಿಸಾಹಿತ್ಯಕ್ಕೆ ರೈತರ ಕೊಡುಗೆ ಕಡಿಮೆಯಿಲ್ಲ. ಕಬ್ಬು, ಹುಲ್ಲು, ಗೊಬ್ಬರ ಸಾಗಿಸುವ ಎತ್ತಿನಬಂಡಿ ಅಥವಾ ಟ್ರ್ಯಾಕ್ಟರುಗಳ ಮೇಲೆ ಕುಟುಂಬದ ಸದಸ್ಯರ ಹೆಸರುಗಳನ್ನು ಕಾಣಬಹುದು. ಈ ಆಧಾರದಲ್ಲಿ ಸದರಿ ಕುಟುಂಬದ ಗಾತ್ರವನ್ನು ಊಹಿಸಬಹುದು ಮತ್ತು ಊರಿನ ಮತದಾರರ ಪಟ್ಟಿ ತಯಾರಿಸಬಹುದು. ಕೆಲವರ ವಾಹನಗಳಲ್ಲಿ ಪ್ರಿಯವಾದ ಸಿನಿಮಾ ಹಾಡಿನ ಸಾಲು, ಅಭಿಮಾನಿ ನಟರ ಬಿರುದು, ತಮ್ಮ ಜಾತಿಯ ಗುರುತು, ಪ್ರಿಯ ರಾಜಕಾರಣಿಗಳ ಹೆಸರು ರಾರಾಜಿಸುತ್ತಿರುತ್ತವೆ. ಚಿಂತೆಯಿಲ್ಲ. ಆದರೆ, ಕೆಲವರು ತಮ್ಮ ನೆಚ್ಚಿನ ರಾಜಕಾರಣಿಯನ್ನು ಅಪ್ಪ ಎಂದು ಕರೆದುಕೊಳ್ಳುವುದು ಯಾಕೋ ಉಚಿತ ಎನಿಸುವುದಿಲ್ಲ. ವಾಹನಗಳ ಮೇಲೆ ಇಷ್ಟದೈವದ ಹೆಸರುಗಳು ಮೆರೆಯುವುದು ಸಹಜ. ಆದರೆ, ಈಚೆಗೆ ಇಷ್ಟದೈವಗಳು ಬೇರೆಯವರನ್ನು ಹೆದರಿಸುವಂತೆ ಸಶಸ್ತ್ರರಾಗಿ ಉಗ್ರಮುಖಭಾವದಲ್ಲಿ ಸ್ಟಿಕ್ಕರುಗಳಾಗಿ ರೂಪಾಂತರ ಪಡೆದಿವೆ. ನಮ್ಮ ಧರ್ಮಗಳ ಅಸ್ತಿತ್ವ ಪ್ರಕಟವಾಗಬೇಕಾದ್ದು ಅವುಗಳ ಒಳಸತ್ವದಿಂದಲೊ 'ಅನ್ಯ'ಧರ್ಮಕ್ಕೆ ಹಾಕುವ ಗುಟುರುಗಳಿಂದಲೊ ತಿಳಿಯಲೊಲ್ಲದು.

ಸ್ಥಳೀಯವಾಗಿ ಓಡಾಡುವ ಆಟೊ, ಟ್ರ್ಯಾಕ್ಟರು, ಟೆಂಪೊಗಳ ಮೇಲೆ ಸಾಮಾನ್ಯವಾಗಿ ಕುಟುಂಬಕೇಂದ್ರಿತ ಸಾಹಿತ್ಯವಿರುತ್ತದೆ. ಕರ್ನಾಟಕದ ಆಟೊಗಳಂತೂ ಭಗ್ನಪ್ರೇಮಕಾವ್ಯದ ಸಂಕಲನಗಳು. ಚಾಲಕರು ಹದಿಹರೆಯದಲ್ಲೇ ಪ್ರೇಮದಲ್ಲಿ ಮುಳುಗಿ, ಪರೀಕ್ಷೆಯಲ್ಲಿ ಫೇಲಾಗಿ, ಆಟೊ ಕೆಲಸಕ್ಕೆ ಇಳಿದರೋ, ಆಟೊ ಚಾಲಕರಾದ್ದರಿಂದ ಹುಡುಗಿಯರು ತಿರಸ್ಕರಿದರೋ, ಅಧ್ಯಯನ ಮಾಡಬೇಕು. 'ಲಾರಿ ಹಿಂದೆ ಹೋದರೆ ಧೂಳು, ಹುಡುಗಿ ಹಿಂದೆ ಹೋದರೆ ಗೋಳು', 'ಪ್ರೀತಿಸಿದವರಿಗೆ ಕೈಕೊಡ್ತಾರೆ ಮೋಸಗಾರರಿಗೆ ಮೈಕೊಡ್ತಾರೆ' ಇತ್ಯಾದಿ ಚರಣಗಳಲ್ಲಿ ಹುಡುಗಿಯರನ್ನು ಕಟಕಟೆಯಲ್ಲಿ ನಿಲ್ಲಿಸಿ, ತಮ್ಮನ್ನೂ ಮುಗ್ಧರೆಂದು ಅವರು ಬಣ್ಣಿಸಿಕೊಂಡಿರುತ್ತಾರೆ. ಪ್ರೇಮಭಗ್ನ ಹಿನ್ನೆಲೆಯಿಲ್ಲದ ಚಾಲಕರು ಮಾತ್ರ ತಮ್ಮ ಆರ್ಥಿಕ ಸ್ಥಿತಿಗತಿ ಕಾಣಿಸಿರುತ್ತಾರೆ. ಅವು ಹಾಯ್ಕುಗಳನ್ನೂ ನಾಚಿಸುತ್ತವೆ. ಒಬ್ಬ ಹೀಗೆ ಬರೆದುಕೊಂಡಿದ್ದ: 'ಅಣ್ಣಾ, ಹಿಂದಿಂದ ಗುದ್ದಬೇಡಿ. ನಮ್ಮ ಓನರ್ ಬಡವ!'.

ದೂರದವರೆಗೆ ಚಲಿಸುವ ಬಸ್ಸು-ಲಾರಿಗಳ ಮೇಲೆ ಹೀಗೆ ವೈಯಕ್ತಿಕ ನೆಲೆಯ ಸಾಹಿತ್ಯ ಇರುವುದಿಲ್ಲ. 'ಮೇರಾ ಭಾರತ್ ಮಹಾನ್', 'ಕನ್ನಡ ಕಲ್ಪವೃಕ್ಷ ಕರ್ನಾಟಕ ಕಾಮಧೇನು', 'ಕನ್ನಡವೆ ಸತ್ಯ ಕನ್ನಡವೇ ನಿತ್ಯ', 'ಕೊಲ್ಲದಿರಿ ಅಂತರ್ಜಲ ಕುಡಿಯಿರಿ ಶುದ್ಧಜಲ'

